SRI B. BASAVALINGAPPA (Minister for Revenue):—

(a) It is reported that there are about 11 vacancies of Village Accountants, who also act as Panchayat Secretaries in Mandya District.

(b) Action has been initiated to fill up the vacancies.

Notices from members required to take up the MICO Employees representation and the question of admission of the Renukacharya College Students to Examination.

ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಮಾನ್ಯ ಅಧ್ಯಕ್ಷರೇ, ಶೂನ್ಯ ವೇಳೆಯಲ್ಲಿ ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ.

ಅಧ್ಯಕ್ಷರು.—ನೋಟೀಸ್ ಕಳುಹಿಸಿಕೊಡಿ.

ಶ್ರೀ ಎಂ. ಚಂದ್ರಶೇಖರ್.—ಕಳುಹಿಸಿದ್ದೇನೆ. ಮೈಕೋ ಕಾರ್ಮಿಕರು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ರೆಪ್ರಸೆಂಟೇಷನನ್ನು ಕೊಟ್ಟಿದ್ದಾರೆ.

ಅಧ್ಯಕ್ಷರು.—ಆ ನೋಟೀಸ್ ಸರಿಯಾಗಿಲ್ಲ. ಆದ್ದರಿಂದ ಬೇರೆ ಕಳುಹಿಸಿ.

ಶ್ರೀ ಎಂ. ವಿ ರಾಜಶೇಖರನ್.—ಶೂನ್ಯ ವೇಳೆಯಲ್ಲಿ ಮುಖ್ಯವಾಗಿರತಕ್ಕ ವಿಷಯಗಳನ್ನು ಎತ್ತುವುದಕ್ಕೆ ಅವಕಾಶವಿದೆ. ಅದಕ್ಕೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟರೆ ಮುಖ್ಯಮಂತ್ರಿಗಳು ವಿಚಾರವನು ತಿಳಿಸುತ್ತಾರೆ.

ಅಧ್ಯಕ್ಷರು.—ನೋಟೀಸ್ ಕೊಟ್ಟ ತಕ್ಷಣ ಉತ್ತರ ಹೇಗೆ ಸಿಗುತ್ತದೆ ? ನಾವು ಇದನ್ನು ಅವರಿಗೆ ಕಳುಹಿಸಬೇಕು, ಅವರು ಉತ್ತರ ಸಿದ್ಧತೆ ಮಾಡಿಕೊಳ್ಳಬೇಕು. ಇದೆಲ್ಲಾ ಸುಮ್ಮಸುಮ್ಮನೆ ಆಗುವುದಿಲ್ಲ. ನಾವೂ ಕೂಡ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಎಂ. ವಿ. ರಾಜಶೇಖರನ್.—ತಮ್ಮ ಕಷ್ಟ ಏನು ಎಂದು ನನಗೂ ಗೊತ್ತು. ಆದರೆ ಮುಖ್ಯ ಮಂತ್ರಿಗಳು ಏನಾದರೂ ಹೇಳುತ್ತಾರೇನೋ ಕೇಳಿ.

ಶ್ರೀ ಎಂ. ಚಂದ್ರಶೇಖರ್.—ನಾನು ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ದಯಮಾಡಿ ನೀವು ನೋಟೀಸನ್ನು ವಿವರವಾಗಿ ಬರೆದು ಸರಿಯಾಗಿ ಕಳುಹಿಸಿಕೊಡಿ.

ಶ್ರೀ ಎಂ. ಚಂದ್ರಶೇಖರ್.—ಅದೇ ರೀತಿ ಇನ್ನೊಂದು ವಿಷಯವೂ ಇದೆ. ರೇಣುಕಾಚಾರ್ಯ ಕಲೇಜಿನ ವಿದ್ಯಾರ್ಥಿಗಳು ಬಂದಿದ್ದಾರೆ. ಅವರಿಗೆ ಎರಡು ಗಂಟೆಗೆ ಪರೀಕ್ಷೆ ಇದೆ.

ಶ್ರೀ ಟಿ. ಆರ್. ಶಾಮಣ್ಣ.—ಪರೀಕ್ಷೆ ೨ ಗಂಟೆಗೆ ಇರುವುದರಿಂದ ಅಧ್ಯಕ್ಷರು ಈ ಬಗ್ಗೆ ಅವಕಾಶ ಕೊಡಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಪತ್ತು ಕನ್ವೆನ್‌ಷನ್ ಪ್ರಕಾರ ಯಾವುದೇ ವಿಚಾರವನ್ನು ಶೂನ್ಯ ವೇಳೆಯಲ್ಲಿ ಎತ್ತುವುದಕ್ಕೆ ಅವಕಾಶ ಇದೆ. ಆ ಪರಿಪಾಠ ಮೊದಲಿನಿಂದ ಬಂದಿದೆ. ಸರ್ವೇ ಸಾಧಾರಣವಾಗಿ ನೋಟೀಸ್ ಕೊಟ್ಟು ಸರ್ಕಾರದ ಅಭಿಪ್ರಾಯವನ್ನು ತಿಳಿದುಕೊಂಡು ಚರ್ಚೆ ಮಾಡುವುದರಿಂದ ಹೆಚ್ಚು ಲಾಭ ಸಿಗುತ್ತದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಒಂದೊಂದು ಸಲ ಮಹತ್ವದ ವಿಚಾರದ ಬಗ್ಗೆ ತಕ್ಷಣ ಪ್ರಸ್ತಾಪ ಮಾಡಬೇಕಾಗುತ್ತದೆ. ನಾವು ಸದನಕ್ಕೆ ಬರುವಾಗ ಕೆಲವೊಂದು ವಿಚಾರಗಳು ನಮ್ಮ ಗಮನಕ್ಕೆ ಬರುತ್ತವೆ. ಅದೇ ರೀತಿ ಪರೀಕ್ಷೆಗೆ ಸಂಬಂಧಪಟ್ಟ ಪ್ರಶ್ನೆ ಸಭೆಯ ಮುಂದಿದೆ. ಮಧ್ಯಾಹ್ನ ಅವರಿಗೆ ಪರೀಕ್ಷೆ ಇದೆ. ನಾಳೆ ತನಕ ಕಾಯುವುದಕ್ಕಾಗುವುದಿಲ್ಲ. ಹೊನ್ನೆ ಕೂಡ ತಾವು ಇಂಥ ವಿಷಯಕ್ಕೆ ಅವಕಾಶ ಮಾಡಿಕೊಟ್ಟಿದ್ದಿರಿ, ಅದರಿಂದ ಅನುಕೂಲವಾಯಿತು. ಅದೇ ರೀತಿ ತುರ್ತಾದ ಕೆಲವು ವಿಚಾರಗಳು ಇದ್ದಾಗ ಸದನದಲ್ಲಿ ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡುವ ಪರಿಪಾಠ ಹಿಂದಿನಿಂದಲೂ ಇದೆ. ಅದಕ್ಕೆ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ. ಮಾನ್ಯ ಅಧ್ಯಕ್ಷರ

ಅಪ್ಪಣೆ ಪಡೆದು ಸದನದಲ್ಲಿ ಎತ್ತುವುದಕ್ಕೆ ಅವಕಾಶವಿದೆ. ಇವತ್ತಿನ ದಿವಸ ಮೈಸೂರು ಕಾರ್ಮಿಕರು ಸಾವಿರಾರು ಜನ ಬಂದು ಇಲ್ಲಿ ನಿಂತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ರೆಪ್ರೆಸಂಟೇಷನ್ ಕೊಟ್ಟಿದ್ದಾರೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೇಳಬೇಕು. ಅದೇ ರೀತಿಯಾಗಿ ವಿದ್ಯಾರ್ಥಿಗಳ ಸಮಸ್ಯೆ ಏನಿದೆ ಇದರ ಬಗ್ಗೆಯೂ ಪ್ರಸ್ತಾಪ ಮಾಡುವುದಕ್ಕೆ ಅವಕಾಶಮಾಡಿಕೊಡಬೇಕು. ಇವತ್ತು ಅವಕಾಶ ಕೊಡದೇ ಮುಂದಕ್ಕೆ ಹಾಕಿದರೆ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ. ಕಡೇಪಕ್ಷ ಎರಡು ಗಂಟೆ ಆದಮೇಲೆ ಅಥವಾ ಸಭೆ ಏಳುವುದಕ್ಕೆ ಮೊದಲು ಉತ್ತರ ತರಿಸಿ ಪೇಳಿಕೆ ಕೊಡುವುದಕ್ಕಾದರೂ ವ್ಯವಸ್ಥೆಯನ್ನು ಮಾಡಬೇಕು.

ಮಾನ್ಯ ಸದಸ್ಯರು ಎತ್ತಿರತಕ್ಕಂಥಾ ವಿಷಯ ಬಹಳ ಮಹತ್ವದ್ದಾಗಿದೆ. ಒಂದೊಂದು ಸಲ ಈ ಸಭೆ ನೋಟೀಸ್ ಇಲ್ಲದೆನೇ ಬಹಳ ಮಹತ್ವದ ವಿಷಯವನ್ನು ಎತ್ತಬೇಕಾಗುತ್ತದೆ. ಆದುದರಿಂದ ತಾವು ದಯಮಾಡಿ ಅದಕ್ಕೆ ಅವಕಾಶ ಕೊಡಿ. ಅದಕ್ಕೆ ತಮ್ಮ ಅಪ್ಪಣೆ ಇಲ್ಲದಿದ್ದರೆ ಬಹಳ ಕಷ್ಟ. ಮೇಲಾಗಿ ಸರ್ಕಾರ ಇಂಥಾ ಮಹತ್ವದ ವಿಷಯಗಳಿಗೆ ಆಮೇಲೆ ಉತ್ತರ ಕೊಡುತ್ತೇವೆ ಎಂದರೆ ಹುಡುಗರಿಗೆ ತೊಂದರೆಯಾಗುತ್ತದೆ. ಒಂದುವೇಳೆ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದಾದರೆ. ಈಗ ಅವರು ಕೊಟ್ಟ ಫ್ಲ್ಯಾಯಿಂದ ಅನುಕೂಲ ಉಂಟಾದರೆ ಅಂಥಾ ವಿಷಯಗಳನ್ನು ತಾವು ಎತ್ತುವುದಕ್ಕೆ ಅಪ್ಪಣೆ ಕೊಡಿಸಬೇಕು ಎಂದು ಹೇಳುತ್ತೇನೆ.

MR. SPEAKER.—You please send notice. I will certainly look into it.

ಶ್ರೀ ಎಸ್. ಆರ್. ಬೊಮ್ಮಾಯಿ.—ಲೋಕಸಭೆಯಲ್ಲಾಗಲಿ ಮತ್ತು ಈ ಸಮಯಲ್ಲೇ ಹಿಂದೆ ಇಂಥ ಮಹತ್ವವಾದ ವಿಷಯಗಳನ್ನು ಜೀರೋ ಅವರ್‌ನಲ್ಲಿ ಎತ್ತಿ ಪ್ರಸ್ತಾಪ ಮಾಡುತ್ತಾ ಇದ್ದೆವು. ಇದು ಅಂಥಾ ಮಹತ್ವವಾದ ವಿಷಯ ಎಂದು ತಾವು ತಿಳಿದುಕೊಳ್ಳಬೇಕು. ಇಂಥಾ ವಿಷಯಗಳನ್ನು ಎತ್ತುವುದಕ್ಕೆ ನಮ್ಮ ಹಕ್ಕನ್ನು ಪೊಟಕು ಮಾಡುವಂಥಾದ್ದು ಸರಿಯಲ್ಲ.

ಅಧ್ಯಕ್ಷರು.—ಅದಕ್ಕೊಸ್ಕರವಾಗಿಯೇ ಮ್ಯಾಟರ್ ಅಂಡರ್ ರೂಲ್ ೩೧೨ ಅಂತ ಇರುವುದು. ತಾವು ಕಳುಹಿಸಿದಂಥಾ ನೋಟೀಸನ್ನು ಸರ್ಕಾರಕ್ಕೆ ಕಳುಹಿಸಿ ಅಲ್ಲಿಂದ ಉತ್ತರ ಬಂದ ನಂತರ ನಾವು ಆಚೆಂಡಾದಲ್ಲಿ ಹಾಕುತ್ತೇವೆ, ನಂತರ ತಾವು ಆ ವಿಷಯದಲ್ಲಿ ಏನು ಕೇಳಬೇಕೋ ಅದನ್ನು ಕೇಳಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದೊಂದು ಸಲ ಏನಾಗುತ್ತದೆ ಎಂದರೆ ತಕ್ಷಣವೇ ಸರ್ಕಾರದ ಆಜ್ಞೆಯನ್ನು ಪಡೆಯತಕ್ಕಂಥಾ ಅವಶ್ಯಕತೆ ಬಂದಾಗ ಇಂಥಾ ಮಹತ್ವದ ವಿಷಯಗಳನ್ನು ತಕ್ಷಣವೇ ಎತ್ತಬೇಕಾಗುತ್ತದೆ. ಉದಾಹರಣೆಗೆ ಬೊನ್ನೆ ದಿವಸ ವಿದ್ಯಾರ್ಥಿಗಳ ಒಂದು ಆಟೆಂಡೆನ್ಸ್ ವಿಚಾರದಲ್ಲಿ ಈ ಮನೆಯಲ್ಲಿ ಎತ್ತಿದ್ದಕ್ಕೆ ಅದಕ್ಕೆ ಸೂಕ್ತವಾದ ಉತ್ತರ ಬಂದಿದ್ದಕ್ಕೆ ಸಾವಿರಾರು ಹುಡುಗರಿಗೆ ಅದರಿಂದ ಬಹಳ ಅನುಕೂಲವಾಯಿತು. ಅಂಥಾ ವಿಚಾರಗಳೇನಾದರೂ ಇದ್ದರೆ ತಮ್ಮ ಅಪ್ಪಣೆ ಪಡೆದೇನೆ ಈ ಸಭೆಯಲ್ಲಿ ಎತ್ತುವುದಕ್ಕೆ ಏತಕ್ಕೆ ಅವಕಾಶ ಕೊಡಬಾರದು? ತಾವು ಈ ಬಗ್ಗೆ ಅವಕಾಶ ಕೊಡಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು.—ಅಂಥಾ ವಿಷಯಗಳಿಗೆ ತಾವು ಸರಿಯಾದ ನೋಟೀಸ್ ಕೊಟ್ಟರೆ ಅದನ್ನು ಸರ್ಕಾರಕ್ಕೆ ಕಳುಹಿಸಿ, ಅದಕ್ಕೆ ಸರ್ಕಾರದಿಂದ ಸರಿಯಾದ ಉತ್ತರ ಬಂದ ನಂತರ ಪ್ರಸ್ತಾಪ ಮಾಡಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಈ ಸಭೆಯ ಕಾರ್ಯಕಲಾಪಗಳ ಬಗ್ಗೆ ರೆಗ್ಯುಲೇಟ್ ಮಾಡತಕ್ಕಂಥಾ ಅಧಿಕಾರ ತಮಗೆ ಇರುವುದರಿಂದ ನಾವು ಯಾರೇ ಆಗಲಿ ಅದನ್ನು ಪ್ರಶ್ನೆ ಮಾಡುವ ಹಾಗಿಲ್ಲ. ಒಂದೊಂದು ಸಲ ನಾವು ಇಲ್ಲಿಗೆ ಬರುವಾಗ ಕೆಲವು ಮಹತ್ವದ ವಿಷಯಗಳು ಬರುವುದರಿಂದ ಆ ಬಗ್ಗೆ ವಿಷಯಗಳನ್ನು ಎತ್ತಬೇಕಾದರೆ ಜೀರೋ ಅವರ್‌ನ್ನು ಕೊಡಲೇ ಬೇಕಾಗುತ್ತದೆ. ತಮಗೆ ಹೇಳಬೇಕಾದರೆ ಈವೊತ್ತಿನ ದಿವಸ ರೇಣುಕಾಚಾರ್ಯ ಕಾಲೇಜಿನಲ್ಲಿ ಎಕ್ಸಾಮಿನೇಷನ್ ಪ್ರಾರಂಭವಾಗಿದೆ. ಯಾರೋ ಒಬ್ಬರು ಆಟೆಂಡೆನ್ಸ್ ರಿಜಿಸ್ಟರ್ ಅನ್ನು ತಿದ್ದಿ ಕೆಲವು ಹುಡುಗರಿಗೆ ಆಟೆಂಡೆನ್ಸ್ ಇಲ್ಲದೇ ಇರುವ ಹಾಗೆ ಮಾಡಿರುವುದರಿಂದ ಅವರಿಗೆ ಪರೀಕ್ಷೆಗೆ ಅವಕಾಶ ಇಲ್ಲದೇ ಇದ್ದ ಹಾಗೆ ಮಾಡಿ ಅವರನ್ನು ಹೊರಗೆ ನಿಲ್ಲಿಸಿದ್ದಾರೆ. ಈ ಬಗ್ಗೆ ತತ್‌ಕ್ಷಣವಾಗಿ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಾದರೂ ಕೂಡ ಸ್ವಲ್ಪ ಕಾಲ ಬೇಕಾಗುತ್ತದೆ. ಇಂಥಾ ಮಹತ್ವದ ವಿಷಯಗಳು ಬಂದಾಗ ಅದನ್ನು ಈ ಸಭೆಯಲ್ಲಿ ಎತ್ತಲು ತಾವು ಅವಕಾಶ ಕೊಡಲೇ ಬೇಕಾಗುತ್ತದೆ. ಆ ಹುಡುಗರಿಗೆ ಹಾಲ್ ಟಿಕೆಟ್ಸ್ ಕೊಡದೆ ಹಾಗೆಯೆ ನಿಲ್ಲಿ

ಸಿದ್ದಾರೆ. ಆದುದರಿಂದ ನಾವು ಈ ಸಂದರ್ಭದಲ್ಲಿ ಕೇಳುವುದೇನೆಂದರೆ ಒಂದುವೇಳೆ ಮಂತ್ರಿಗಳೇನಾದರೂ ಕೂಡ ಮಧ್ಯೆ ಪ್ರವೇಶ ಮಾಡುವುದಕ್ಕಾಗುತ್ತದೆಯೇ ಎಂದು. ಆದರೆ We cannot force the Government. Is it possible for them to intervene and instruct the Principal pending further enquiry ? ಈ ವಿಚಾರ ನಮಗೂ ಗೊತ್ತಿಲ್ಲಾ, ನಿಮಗೂ ಗೊತ್ತಿಲ್ಲಾ. If it is possible, the Education Minister may reply. ಇದರ ಬಗ್ಗೆ ಅವರೇನಾದರೂ ಪ್ರವೇಶ ಮಾಡುವುದಕ್ಕಾಗುತ್ತದೆಯೇ ಇಲ್ಲವೇ ?

ಇನ್ನು ಎರಡನೆಯದಾಗಿ ಮೈಕೋ ಕಾರ್ಮಿಕರ ಬಗ್ಗೆ ಹೇಳುವುದಾದರೆ ನಾವು ಇಲ್ಲಿಗೆ ಬರುವಾಗ ಅವರು ನಮಗೆ ಹೇಳಿದರು, ತಮ್ಮನ್ನೂ ಸಹ ಭೇಟಿ ಮಾಡಿದ್ದರಂತೆ ಒಂದುವೇಳೆ ಸಾಧ್ಯವಾದರೆ ರಿಪ್ಲೈ ಇವತ್ತಾದರೂ ಕೊಡಿ—ಇಲ್ಲವೇ ನಾಳೆಯಾದರೂ ಕೊಡಿ. ಆದರೆ ಈ ಎಕ್ಸಾಮಿನೇಷನ್ ಬಗ್ಗೆ ನಾಳೆ ಬೇಕಾದರೆ ವಿವರವಾದ ಉತ್ತರ ಕೊಡಿ. ಈವೊತ್ತು ಪರೀಕ್ಷೆ ಪ್ರಾರಂಭವಾಗುವುದರಿಂದ ಅವರಿಗೆ ಪರೀಕ್ಷೆಗೆ ಕೂರಲು ಹಾಲ್‌ಟಿಕೆಟ್ ಸಿಗದೇ ಇರುವುದರಿಂದ, ಅವರೆಲ್ಲಾ ಹೊರಗೇನೇ ಇದ್ದಾರೆ. ಆದುದರಿಂದ ತಮ್ಮ ಅಪ್ಪಣೆ ಪಡೆದು ಮಾನ್ಯ ವಿದ್ಯಾಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಈ ಬಗ್ಗೆ if it is possible, the Education Minister may reply.

ಶ್ರೀ ಡಿ. ದೇವರಾಜ ಅರಸ್.—ಈ ಎರಡು ವಿಚಾರಗಳಿಗೂ ಕೂಡ ನಮಗೆ ನೋಟೀಸ್ ಇಲ್ಲದೇ ಏನೂ ಹೇಳುವುದಕ್ಕೆ ಬರುವುದಿಲ್ಲಾ. I am not able to reply. ಈವೊತ್ತು ವೆಂಕೋನವರು ಬಂದು ನನಗೆ ರೆಪ್ರೆಸೆಂಟೇಷನ್ ಕೊಟ್ಟಿದ್ದಾರೆ. I must go into the question. It is not a matter in which I can straight away say 'Yes' or 'no' Regarding the examination question, the Minister is at it and whatever action he will take as per rules and regulations he will inform the House. Why they are not allowed for the examination and whether they can be allowed–, this is a matter we will immediately look into, Government is going to do whatever is possible and furnish a reply.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿದ್ಯಾಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಈ ಸಭೆಯು ಈ ದಿನ ಮುಕ್ತಾಯವಾಗುವುದರೊಳಗಾದರೂ ಕೂಡ ಅವರು ವಿಚಾರ ತಿಳಿದು ಕೊಂಡು ಉತ್ತರ ಕೊಡಬೇಕು.

SRI DEVARAJ URS.—If not to-day, we will reply to-morrow.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೂ ಗೊತ್ತಿದೆ. ಸರಿಯಾಗಿ ನೋಟೀಸ್ ಕೊಡದೇ ಹೋದರೆ ಏನು ಮಾಡುವುದಕ್ಕಾಗುತ್ತದೆ ? It will not be in order. ಇದರಲ್ಲಿ ಸರಿಯಾಗಿ ವಿಷಯ ಬರೆದಿಲ್ಲಾ. ಮಾನ್ಯ ದೇವೇಗೌಡರು ಈಗ ವಿಷಯಗಳನ್ನು ತಿಳಿಸಿದ್ದಾರೆ. ಆದುದರಿಂದ ಮಾನ್ಯ ಸದಸ್ಯರು ಸರಿಯಾದ ನೋಟೀಸ್ ಕೊಡಲಿ. ಅದನ್ನು ಸರ್ಕಾರಕ್ಕೆ ಕಳುಹಿಸಿ, ಅವರಿಂದ ಉತ್ತರ ಬಂದ ಮೇಲೆ ಈ ವಿಷಯ ಪ್ರಸ್ತಾಪ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ವಿದ್ಯಾ ಮಂತ್ರಿಗಳು ಸಾಧ್ಯ ಇದ್ದರೆ ಆಲೋಚನೆ ಮಾಡುತ್ತೇನೆ ಅಂತ ಹೇಳಿದ್ದಾರಲ್ಲ ಅಷ್ಟೇ ಸಾಕು. He is aware of the question. If necessary, he will take steps today.

ಶ್ರೀ ಟಿ. ಆರ್. ಶಾಮಣ್ಣ.—ಈವೊತ್ತು ಪರೀಕ್ಷೆ ಪ್ರಾರಂಭವಾಗುತ್ತದೆ. ದಯವಿಟ್ಟು ಮಾನ್ಯ ಮಂತ್ರಿಗಳು ಕೂಡಲೇ ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು.

ಶ್ರೀ ಪಿ. ರಾಮದೇವ್.—ಸ್ವಾಮಿ, ನಿಮ್ಮ ಮಕ್ಕಳೇ ಆಗಿದ್ದರೆ ಏನು ಮಾಡುತ್ತಿದ್ದಿರಿ ? ಆದುದರಿಂದ ತಾವು ಆ ಪರೀಕ್ಷೆಯ ವಿದ್ಯಾರ್ಥಿಗಳ ಕಡೆಗೆ ಸ್ವಲ್ಪ ದೃಷ್ಟಿ ಹರಿಸಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು It will be looked into immediately. ಅಂತ ಹೇಳಿದ್ದಾರಲ್ಲಾ ಸಾಕು.